ದಿವಾಳಿಯಾದ ಡಿಕ್ರೀ ದೇಣೇದಾರ ನಂಜೆನಗೂಡು ಕಸಬೆಯಲ್ಲಿನುವ ಹನುಮಂತಯ್ಯನ ಮಗ ಮಳಿಗೇ ಪುಟ್ಟಣ್ಣನ ವಿಷಯದಲ್ಲಿ—

ಸ್ ೧೮೮೮ನೇ ಇಸವಿ ದಿವಾಳಿ ಕೇಸ್ ನಂಬರ್ 307.

ಹುಕುಂ.

ಮೇಲ್ಕಂಡ ಮಳಿಗೆ ಪುಟ್ಟಣ್ಣನು ನಿರ್ಬಂಧದಿಂದ ಖುಲಾಸೆಯಾಗಬೇಕೆಂದು ಕೊಟ್ಟ ಅರ್ಜೀ ಅಂಶವು ರೂಬರೂ ಅರ್ಜೇದಾರನಾದ ಪುಟ್ಟಣ್ಣನ ಪರವಾಗಿ ಫಸ್ಟ್ ಗ್ರೇಡ್ ಪ್ಲೀಡರ್ ವೆಂಕಟರಾವಯ್ಯನವರುನ್ನೂ ಮತ್ತು ಸದರೀಯವನ ಲೇಣೇದಾರ್ರಾದ 19ನೇ ಮಂಡಿ ಕೇಶವಯ್ಯನ ಕಡೆ ಅಡ್ವೊಕೇಟ್ ಕೃಷ್ಣಯ್ಯಂಗಾರ್ 18ನೇ ಮೊಹರ್ದಿಸಾಬೀ ಕಡೆ ಫಸ್ಟ್ ಗ್ರೇಡ್ ಪ್ಲೀಡರ್ ಸುಬ್ಬರಾಯರು ಯಿವರುಗೂ ದರ್ಯಾಫ್ತೀ ಮಾಡಲ್ಪಟ್ಟಿತು.

ಈ ಕೆಳಗೆ ನಮೂದು ಮಾಡಲ್ಪಡುವ ಲೇಣೇದಾರ್ರು ತಮಗೆ ಈ ದರ್ಯಾಫ್ತಿ ನೋಟಿಸ್ ಜಾರಿಯಾಗಿದ್ದಾಗ್ಯೂ ಖುದ್ದಾಗಿಯಾಗಲಿ ಅಥವಾ ಲಾಯರ್ ಮೂಲಕವಾಗಿಯಾಗಲಿ ಹಾಜರಾಗುವದಕ್ಕೆ ತಪ್ಪಿಹೋದರು, ಯಾರಂದರೆ—1ನೇ ಶ್ರೀಕಂಠೇಶ್ವರ ಬ್ಯಾಂಕ್ 2ನೇ ನಾರಣಪ್ಪ 3ನೇ ಶ್ರೀಕಂಠಜೋಯಿಸ 4ನೇ ನಂಜಪ್ಪ 5ನೇ ಪುಟ್ಟಸಾಮಿಶಟ್ಟಿ 6ನೇ ಚಿಕ್ಕ ಪುಟ್ಟಸಾಮಿಶಟ್ಟಿ 7ನೇ ಪುಟ್ಟಸಾಮಿರಾ 8ನೇ ಬಿಳಿಗಿರಿ ರಂಗಾಬಾಬಾರು 9ನೇ ಮಳಿಗೇ ನಾಗಂಣ 10ನೇ ದಾಸಪ್ಪ 11ನೇ ಮಸ್ತ್ಯಾಸಾಬಿ 12ನೇ ಖಾಶಿಂಜೇಗಸಾಬಿ 13ನೇ ಬಸರಾನಿಕೆಂಪಂಣ 14ನೇ ಚಿಕ್ಕಮುದ್ದಪ್ಪ 15ನೇ ಸುಡಗಾಡಪ್ಪ 16ನೇ ಸುಡಗಾಡಪ್ಪ 17ನೇ ಚಿಕ್ಕನಾಗಯ್ಯ 20ನೇ ಚನ್ನಬಸಂಣ 21ನೇ ಸುಬ್ಬರಾಯಶಟ್ಟಿ 22ನೇ ಕಾಡಬಸಪ್ಪ 23ನೇ ಅನಂತಪ್ಪ.

ಸಿವಿಲ್ ಪ್ರೊಸಿಜ್ಯೂರ್ ಕೋಡಿನ 20ನೇ ಅಧ್ಯಾಯದ ನಿರೂಪಣೆಗಳ ಫಲವನ್ನು ಸದರೀ ಮಳಿಗೆ ಪುಟ್ಟಣ್ಣನು ಹೊಂದುವದಕ್ಕೆ ಹಕ್ದುದಾರನಾಗುವದರ ಮೂಲಕ ದಿವಾಳಿಯಾದವನೆಂದು ತೀರ್ಮಾನಿಸಲ್ಪಟ್ಟಿರುತ್ತೆಯಾಗಿ ಸದರೀ ದಿವಾಳಿಯಾದವನನ್ನು ನಿರ್ಬಂಧದಿಂದ ವಿಮೋಚನೆ ಮಾಡಿಸುವದಲ್ಲದೆ ಇವಕ್ಕೆ ಲಗ್ಗತ್ತಾಗಿರುವ ಪಟ್ಟಿಯಲ್ಲಿ ಕಂಡ ಯಾವ ಸಾಲಕೋಸ್ತರವಾಗಿಯಾಗಲಿ ದಸ್ತಗಿರಿಮಾಡಲ್ಪಟ್ಟು ನಿರ್ಬಂಧಪಡುವ ಜಾಬ್ದಾರಿಯಿಂದ ಸಹ ಆವನನ್ನು ನಿಖಾಲಸ್ ಮಾಡಲಾಗಿರುತ್ತೆಯೆಂದು ಇದರಿಂದ ಹುಕುಂ ಮಾಡಲ್ಪಟ್ಟಿರುತ್ತೆ.

ಸ್ ೧೮೮೯ನೇ ಇಸವಿ ಆಗಸ್ಟ್ 14ನೇ ತಾರೀಖಿನಲ್ಲಿ ಈ ಕೋರ್ಟು ಮೊಹರ್ ನಮ್ಮ ದಸ್ತಖತ್ತಾನಿ ಕೊಡಲ್ಪಟ್ಟಿತು.

ಸಾಲದಪಟ್ಟಿ.

ನಂಬರು.	ಲೇಣೇದಾರ್ರು ಅಥವಾ ದಾವಾದಾರ್ರ ಹೆಸರು ಮತ್ತು ವಿವರ ಮತ್ತು ಹಾಲೀ ತಿಳಿಯಬಂದ ಅವರುಗಳ ವಾಸಸ್ಥಳ.	ಜೊಬಿಂಗೆ.	ಯಾವಾಗ ಸೆಟ್ಲಾಗಿದ್ದದ್ದು.	ದೇಣಿಯ ಸ್ವಭಾವಮತ್ತು ಅದರ ವ್ಯತಿಶಲ ಮತ್ತು ಗಿರ್ವೀಯೇನಾದರೂ ಇದ್ದರೆ.	ಷರಾ.
1	ನಂಜೆನಗೂಡು ಶ್ರೀಕಂಠೇಶ್ವರಬ್ಯಾಂಕ್ ..	422 7 0	..	ಡಿಕ್ರೀ ಬಾಬತು	
8	ಬಿಳಿಗಿರಿ ರಂಗಾಬಾರಿ ..	50 0 0	..	ಡಿಟೋ	
19	ಬೆಂಗಳೂರು ಮಂಡೀ ಕೇಶವಯ್ಯ ..	400 0 0	..	ಡಿಟೋ	
21	ಬೇಲೂರು ಸುಬ್ಬರಾಯಶಟ್ಟಿ ..	70 0 0	..	ಡಿಟೋ	
22	ಮಡಿಕೆರೇ ಕಾಡಬಸಪ್ಪ ..	140 0 0	..	ಡಿಟೋ	
		1082 7 0			

ಸಿ. ಶ್ರೀನಿವಾಸಯ್ಯಂಗಾರ್,
ಸಬ್ ಜಡ್ಜ್.

ಫ್ರೆಂಚ್‌ರಾಕ್ಸ್ ಸಬ್ ಡಿವಿಜ್.

ಕಾರೀಖು 17ನೇ ಆಗಸ್ಟ್ ೧೮೮೯.

ಇದರಿಂದ ತಿಳಿಯಪಡಿಸುವದೇನಂದರೆ, ಫ್ರೆಂಚ್‌ರಾಕ್ಸ್ ಸಬ್ ಡಿವಿಜ್‌ಗೆ ಸೇರಿದ ಶ್ರೀರಂಗಪಟ್ಣ ತಾಲ್ಲೂಕು ಸಬ್ ರೆಜಿಸ್ಟ್ರಾರ್ ಆಫಿಸಿನಲ್ಲಿ ಈ ಕೆಳಗೆ ನಮೂದು ಇರುವ ದಸ್ತಾವೇಜುಗಳು ಕ್ರಮವಾದ ವಾರಸ್ದಾರ್ರ ಆಗಲಿ ಅಥವಾ ಕ್ರಮವಾಗಿ ಅಧಿಕಾರ ಹೊಂದಿದ ಮುತಾಲೀಕರೇ ಆಗಲಿ ಈ ತಾರೀಖು ಲಾಗಾಯತು ಒಂದು ತಿಂಗಳೊಳಗೆ ಹಾಜರಾಗಿ ವಾಪಸ್ಪಡೆಯಬೇಕು, ಹಾಗಿಲ್ಲದ ಭಾಗದಲ್ಲಿ ರೆಜಿಸ್ಟ್ರೇಷನ್ ಆಕ್ಟ್ 8ನೇ ಸೆಕ್ಷನ್ ಮೇರೆ ನಾಶ ಪಡಿಸಲ್ಪಡುತ್ತೆ.